ಸಂಪನ್ಮೂಲದಿಂದ ಹಿಡಿದು, ಸಂಸ್ಕರಣೆ, ಮಾರುಕಟ್ಟೆ – ಹೀಗೆ ಪ್ರತಿ ಹಂತದಲ್ಲಿಯೂ ವಿವಾದದ ಛಾಯೆ ಇದಕ್ಕಿದೆ.

ಸಾವಯವ ಕಾಟನ್ ಅತ್ಯಂತ ಪರಿಸರಸ್ನೇಹಿ ಎಂದು ಪರಿಗಣಿಸಲಾಗಿದೆ. ಇದರ ಉತ್ಪಾದನೆಯಲ್ಲಿ ಅತ್ಯಂತ ಕಡಿಮೆ ಕೀಟನಾಶಕ ಹಾಗೂ ರಾಸಾಯನಿಕವನ್ನು ಬಳಸಲಾಗುತ್ತದೆ. ಆದರೆ ಒಟ್ಟು ಉತ್ಪಾದನೆಯಾಗುತ್ತಿರುವ ಕಾಟನ್‌ನಲ್ಲಿ ಶೇ 1ರಷ್ಟೂ ಸಾವಯವ ಕಾಟನ್‌ನ ಉತ್ಪಾದನೆ ಇಲ್ಲ. ಏಕೆಂದರೆ ಸಾವಯವ ಹತ್ತಿ ಕೃಷಿ ಹೆಚ್ಚು ಕೆಲಸಗಾರರನ್ನು ಬಯಸುತ್ತದೆ. ಹೂಡಿಕೆ ಹೆಚ್ಚು. ಆದರೆ ಇಳುವರಿ ಕಡಿಮೆ. ಜೊತೆಗೆ ಬೆಳೆದ ಬೆಳೆ ಮಾರಾಟವಾಗುತ್ತದೆ ಎನ್ನುವ ಯಾವ ಖಾತರಿಯೂ ರೈತರಿಗೆ ಇರುವುದಿಲ್ಲ. ಅಲ್ಲದೆ ಕಾರ್ಪೊರೇಟ್ ವ್ಯವಸಾಯದ ಟ್ರೆಂಡ್‌ನೊಂದಿಗೆ ಸ್ಪರ್ಧಿಗಿಳಿಯುವುದು ರೈತರಿಗೆ ಸಾಧ್ಯವಾಗುತ್ತಿಲ್ಲ.

ಪರಿಸರಸ್ನೇಹಿ ಹಾಗೂ ಸಾಂಪ್ರದಾಯಿಕ ಹತ್ತಿಗೆ ಪರ್ಯಾಯ ಎನ್ನುವ ಕಾರಣಕ್ಕೆ ಅನೇಕ ವಿನ್ಯಾಸಕರು ಬಿದಿರಿನಿಂದ ತಯಾರಿಸಲಾದ ನಾರನ್ನು ಬಳಸಿಕೊಳ್ಳುತ್ತಿದ್ದಾರೆ. ಆದರೆ ಇದರ ಸಂಸ್ಕರಣೆಯಲ್ಲಿ ಬಳಸಲಾಗುತ್ತಿರುವ ರಾಸಾಯನಿಕಗಳು ಪರಿಸರಕ್ಕೆ ಅತ್ಯಂತ ಹಾನಿಕಾರಕ. ಪರಿಸರಸ್ನೇಹಿ ಹೆಸರಿನಲ್ಲಿ ಕಡಿಮೆ ಬೆಲೆಯಲ್ಲಿ ಸೆಕೆಂಡ್ ಹ್ಯಾಂಡ್ ಬಟ್ಟೆಗಳನ್ನು ಪ್ರಪಂಚದ ನೂರಕ್ಕೂ ಹೆಚ್ಚು ದೇಶದಲ್ಲಿ ಮಾರಾಟ ಮಾಡಲಾಗುತ್ತಿದೆ. ಇದೂ ಕೂಡ ವಿವಾದಕ್ಕೆ ಮೂಲವಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಗ್ರಾಹಕರು ಪರಿಸರಸ್ನೇಹಿ ಫ್ಯಾಷನ್ ಕಡೆಗೆ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಜನರ ಈ ಆಕರ್ಷಣೆಯನ್ನು ಗಮನಿಸಿದ ಅನೇಕ ಕಂಪನಿಗಳು ಪರಿಸರಸ್ನೇಹಿ ಹೆಸರನ್ನು ಮಾರುಕಟ್ಟೆ ತಂತ್ರವಾಗಿ ಬಳಸಿಕೊಳ್ಳುತ್ತಿದ್ದಾರೆಯೇ ವಿನಾ ಉತ್ಪಾದನೆಯಲ್ಲಿ ಪರಿಸರಸ್ನೇಹಿ ನಿಯಮವನ್ನು ಅಳವಡಿಸಿಕೊಂಡಿಲ್ಲ ಎನ್ನುವ ವಾದವೂ ಇದೆ. ಇದು ಪರಿಸರ ಸ್ನೇಹಿ ಬದುಕಿನೆಡೆಗಿನ ಜಾಗೃತಿಯನ್ನು ಹಾದಿ ತಪ್ಪಿಸಿದೆ.

## ಪರಿಸರಸ್ನೇಹಿ ಫ್ಯಾಷನ್‌ನ ಭವಿಷ್ಯ

ಫ್ಯಾಷನ್ ಜಗದಲ್ಲಿ ಪರಿಸರಸ್ನೇಹಿ ಚಿಂತನೆಯ ದೀಪ ಹೊತ್ತಿಕೊಂಡಾಗಿದೆ. ಅನೇಕ ಬ್ರ್ಯಾಂಡ್‌ಗಳು ಈ ನಿಟ್ಟಿನಲ್ಲಿ ಕೆಲಸ ಮಾಡಿರುವ ಪರಿಣಾಮವಾಗಿ ವೇಗನ್ ಫೂಟ್‌ವೇರ್, ವೇಗನ್ ಲೆದರ್, ಜೀರೊ ವೇಸ್ಟ್ ಫ್ಯಾಬ್ರಿಕ್‌ಗಳು ಜನಪ್ರಿಯವಾಗುತ್ತಿವೆ. ಜನಪ್ರಿಯ ಬ್ರ್ಯಾಂಡ್‌ಗಳು ಪರಿಸರಸ್ನೇಹಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿವೆ. ಅನಾನಸ್ ಎಲೆಯ ಲೆದರ್‌ನಿಂದ ತಯಾರಿಸಲಾದ ಬ್ಯಾಗ್, ಶೂ, ಚಪ್ಪಲಿಗಳು ಈಗಾಗಲೇ ಮಾರುಕಟ್ಟೆಯಲ್ಲಿ ಸ್ಥಾನ ಪಡೆದುಕೊಂಡಿವೆ. ತೆಂಗಿನಕಾಯಿ ತ್ಯಾಜ್ಯದಿಂದ ತಯಾರಿಸಿದ ಜಂಪರ್ಸ್ ಅನೇಕರ ಮನ ಗೆದ್ದಿದೆ.



ಬಳಕೆಯಾದ ಬಟ್ಟೆಗಳನ್ನು ಪುನರ್‌ಬಳಕೆ ಮಾಡಿ ಹೊಸ ಬಟ್ಟೆಗಳನ್ನು ತಯಾರಿಸುವ ಕೆಲಸವನ್ನೂ ಕೆಲವು ಕಂಪನಿಗಳು ಕೈಗೆತ್ತಿಕೊಂಡಿವೆ. ಕೌನ್ಸಿಲ್ ಆಫ್ ಫ್ಯಾಷನ್ ಡಿಸೈನರ್ಸ್ ಆಫ್ ಅಮೆರಿಕ ಇತ್ತೀಚೆಗೆ ಪರಿಸರಸ್ನೇಹಿ ಫ್ಯಾಷನ್ ಮಾರ್ಗದರ್ಶಿಯನ್ನು ಬಿಡುಗಡೆ ಮಾಡಿದೆ. ಇದು ಪರಿಸರಕ್ಕೆ ಪೂರಕವಾದ ಉತ್ಪನ್ನಗಳ ವಿಷಯದಲ್ಲಿ ಸಹಕಾರಿಯಾಗಲಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಪರಿಸರಸ್ನೇಹಿ ಫ್ಯಾಷನ್ ಇನ್ನಷ್ಟು ಮುನ್ನೆಲೆಗೆ ಬರುವ ಸೂಚನೆಗಳಂತೂ ಇದ್ದೇ ಇವೆ.

ಈ ಮೊದಲು ಹೇಳಿದಂತೆ – ಗಾತ್ರ, ಶಕ್ತಿ, ಜನಪ್ರಿಯತೆ ಎಲ್ಲದರಲ್ಲಿಯೂ ಪರಿಸರಸ್ನೇಹಿ ಫ್ಯಾಷನ್ ಎನ್ನುವುದು ಫಾಸ್ಟ್ ಫ್ಯಾಷನ್ ಆನೆಯೆದುರು ನಿಂತ ಇರುವೆಯೇ. ಆದರೆ ಇರುವೆಯೊಂದು ಸಲಗದ ಸೊಂಡಿಲೊಳಗೆ ತೂರಿಕೊಂಡು ಸಲಗವನ್ನೇ ಮಣಿಸಿದ ಕತೆ ಗೊತ್ತಿಲ್ಲವೇ? ವಿನಾಶದ ದಿಕ್ಕಿಗೆ ಶರವೇಗದಿಂದ ಕರೆದೊಯ್ಯುತ್ತಿರುವ ಫಾಸ್ಟ್ ಫ್ಯಾಷನ್ ಎನ್ನುವ ಆನೆಯನ್ನು ಮಣಿಸಲೇಬೇಕಾಗಿರುವುದು ಇರುವೆಯ ಸಾಮರ್ಥ್ಯ ಪ್ರದರ್ಶನಕ್ಕಷ್ಟೇ ಅಲ್ಲ; ನಮ್ಮ ಮುಂದಿನ ಪೀಳಿಗೆಗೆ ಈ ಜಗತ್ತನ್ನು ಉಳಿಸುವ ದೃಷ್ಟಿಯಿಂದ ಅನಿವಾರ್ಯವೂ ಹೌದು.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ.
ಇ–ಮೇಲ್: feedback@sudha.co.in


SDP AYURVEDA
ಎಸ್‌ಡಿಪಿ
ದಂತ ಚೂರ್ಣ
ನೈಸರ್ಗಿಕ ಆಯುರ್ವೇದ ದಂತಮಂಜನ
॥ ಪ್ರಾತರ್ಭುಕ್ತ್ವಾ ಚ ಮೃದ್ವಗ್ರಂ ಕಷಾಯ ಕಟು ತಿಕ್ತಕಂ॥ (ವಾಗ್ಭಟ)
ಚೊಗರು, ಖಾರ, ಕಹಿ ಇರುವ
ಗಿಡಮೂಲಿಕೆಗಳಿಂದ ಹಲ್ಲು ಉಜ್ಜಿದರೆ
ಅಲ್ಲಾಡುವ ಹಲ್ಲುಗಳು ಸ್ಥಿರವಾಗುವುದು.
ಒಸಡಿನ ರಕ್ತಸ್ರಾವ ನಿಲ್ಲುವುದು.
ಬಾಯಿವಾಸನೆ ನಿವಾರಿಸುವುದು.
ಹಲ್ಲು ಜುಂಗುಟ್ಟುವುದನ್ನು ತಡೆಯುವುದು.
ಆರೋಗ್ಯವಂತ ಹಲ್ಲುಗಳಿಗಾಗಿ
ಎಸ್‌ಡಿಪಿ ದಂತಚೂರ್ಣ ಉಪಯೋಗಿಸಿ


Proprietary Ayurvedic Medicine
ಎಸ್‌ಡಿಪಿ ರೆಮೆಡೀಸ್ & ರಿಸರ್ಚ್ ಸೆಂಟರ್
ಪರ್ಲಡ್ಕ, ಪುತ್ತೂರು, ದ.ಕ.
ಇಮೇಲ್: sdpayurveda@gmail.com
Customer Care No.: +91 99004 09184